# Library & Information Centre

## GIT in NEWS

**Tarun Bharat 09-02-2016**

# चर्चासत्रात जीआयटीच्या विद्यार्थ्यांना मार्गदर्शन

प्रतिनिधी
बेळगाव

केएलएस संचालित जीआयटी कॉलेजच्या एमबीए विभागातर्फे 'संशोधन' या विषयावर दोन दिवशीय चर्चासत्राचे आयोजन करण्यात आले होते. प्राचार्य ए. एस. देशपांडे अध्यक्षस्थानी होते.

एनआयटीआयई मुंबईचे डॉ. सचिन कांबळे, जीआयटी एमबीए विभागाचे प्रमुख डॉ. पी. एम. कुलकर्णी, गोवा इन्स्टिट्यूट ऑफ मॅनेजमेंटचे प्रा. रोहित मुतकेकर, प्रा. प्रसाद कुलकर्णी आदींनी मार्गदर्शन केले.

संशोधनातील विविध प्रक्रिया संदर्भात यावेळी विस्तृत चर्चा करण्यात आली. या उपक्रमातून संशोधनासाठीच्या नव्या कल्पना आणि उपलब्ध आव्हानांची माहिती मिळू शकेल, असे अध्यक्षीय भाषणात डॉ. देशपांडे यांनी सांगितले. प्रा. प्रसाद कुलकर्णी यांनी आभार मानले.



बेळगाव : प्राचार्य डॉ. ए. एस. देशपांडे दीपप्रज्वलन करताना. समवेत डॉ. प्रवीण कुलकर्णी, प्रा. प्रसाद कुलकर्णी, डॉ. सचिन कांबळे, डॉ. एस.जी. कुलकर्णी आदी.

**Times of India 09-02-2016**

**English course:** BJ Emmanuel Raj, consultant, South India, Cambridge English, spoke on the 'Importance of Communication Skills' at the Gogte Institute of Technology (GIT) in Belagavi. He explained how the Cambridge Business English Certification (BEC) course can help enhance communication skills and build a resume that makes a difference. He spoke on how English is an important language of global communication. GIT's Centre of Language & Communications Studies, in association with FACE Consultants, has introduced the Cambridge Business English Certification on the campus to benefit the student community and professionals to enhance their workplace communication skills.

**Medallist:** Gogte Institute of Technology's (GIT) Akshay Tarale, second-year EE student, won three gold medals in 100 m, 200 m and 400 m runs at national-level sports fest ZEST '16 at the College of Engineering, Pune, recently. The badminton team of GIT was the overall runner-up.

# LIBRARY & INFORMATION CENTRE

## GIT in NEWS

**Udayavani 07-02-2016**

# ಸಾಧನೆ ಹಾದಿಯಲ್ಲಿ ಅಡ್ಡಿ-ಆತಂಕ ಸಹಜ

## ■ ಸೋಲಿನ ಅನುಭವದ ಪಾಠದಿಂದ ಗೆಲುವಿನತ್ತ ಸಾಗಿ: ನಾರಾಯಣಮೂರ್ತಿ

ಹುಬ್ಬಳ್ಳಿ: ಗುರಿಯೆಡೆಗೆ ಸಾಗಬೇಕೆಂದರೆ ದೃಢ ಮನಸ್ಸು ಇರಬೇಕು. ಸಾಧನೆಗೆ ಹಲವಾರು ಅಡ್ಡಿ-ಆತಂಕಗಳು ಸಹಜ. ಆದರೆ ಯಾರೊಬ್ಬರ ಮಾತಿಗೂ ಕಿವಿಗೊಡದೇ ನಿಮ್ಮ ಗುರಿ ಸಾಧನೆಯತ್ತ ಗಮನಹರಿಸಿ ಎಂದು ನೊಬೆಲ್ ಪ್ರಶಸ್ತಿ ಪುರಸ್ಕೃತ ಬಾಂಗ್ಲಾದೇಶದ ಪ್ರೊ|ಮೊಹಮ್ಮದ ಯೂನುಸ್ ಅವರು ಸಲಹೆ ನೀಡಿದರು.

ನಗರದಲ್ಲಿ ದೇಶಪಾಂಡೆ ಪ್ರತಿಷ್ಠಾನದ ಲೀಡ್ ಹಾಗೂ ಟೈಕಾನ್ ಹುಬ್ಬಳ್ಳಿ-2016ರ ನಿಮಿತ್ತ ಶನಿವಾರ ನಡೆದ ಟೈ ಹಾಗೂ ಲೀಡ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಹೋರಾಟ ಜೀವನದ ಅಂಗವಾಗಿರಬೇಕು. ಜೀವನದ ಪ್ರಯಾಣ ಕೆಲ ಬಾರಿ ಕಷ್ಟಕರವೆನಿಸುತ್ತದೆ. ಅಂತಹ ಸಂದರ್ಭದಲ್ಲಿ ಆತ್ಮವಿಶ್ವಾಸ ಕಳೆದುಕೊಳ್ಳದೇ ಧೈರ್ಯದಿಂದ ಮುನ್ನುಗ್ಗಬೇಕು ಎಂದು ತಿಳಿಸಿದರು.

ಗ್ರಾಮೀಣ ಬ್ಯಾಂಕ್ ಸ್ಥಾಪಿಸುವ ಸಂದರ್ಭ ತಮಗೆ ಅನೇಕ ಅಡ್ಡಿ-ಆತಂಕಗಳು ಎದುರಾದವು. ಆದರೆ ಬಡ ಗ್ರಾಮೀಣ ಜನರಿಗೆ ಆರ್ಥಿಕ ಸಹಾಯ ಮಾಡಬೇಕೆಂಬ ಉದ್ದೇಶದಿಂದ ತಾವು ಆರ್ಥಿಕ ಸಹಾಯ ಮಾಡಿದ್ದನ್ನು ಹಾಗೂ ನಂತರದ ದಿನಗಳಲ್ಲಿ ಬ್ಯಾಂಕ್‌ಗಳಿಗೆ ಬಡವರ ಪರವಾಗಿ ಜಾಮೀನು ನೀಡಿದ್ದನ್ನು ಸ್ಮರಿಸಿಕೊಂಡರು.

ಇನ್ಫೋಸಿಸ್‌ನ ಎನ್.ಆರ್. ನಾರಾಯಣಮೂರ್ತಿ ಮಾತನಾಡಿ, ಯುವಜನತೆ ಗಟ್ಟಿಯಾದ ಮಾನಸಿಕ ಸ್ಥಿತಿ ರೂಪಿಸಿಕೊಳ್ಳಬೇಕು. ಹಿಂದಿನ ಸೋಲುಗಳನ್ನೇ ನೆನೆಯುತ್ತ ಕೂರುವುದರಿಂದ ಯಶಸ್ಸಿನ ಮೆಟ್ಟಿಲೇರಲು ಸಾಧ್ಯವಿಲ್ಲ. ಸೋಲು ಮರೆತು ಅದರ ಅನುಭವದ ಪಾಠದಿಂದ ಗೆಲುವಿನತ್ತ ಸಾಗುವಂತ ಮನಸ್ಥಿತಿಯನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಯುವಕರಲ್ಲಿ ನಾಯಕತ್ವ ಗುಣ ಇರಬೇಕು. ಆತ್ಮವಿಶ್ವಾಸ, ಕ್ರಿಯಾಶೀಲತೆಯಂತಹ ಗುಣಗಳು ಯುವಕರಿಗೆ ಬೇಕು. ಜೀವನದಲ್ಲಿ ಎದುರಾಗುವ ಕಷ್ಟಗಳನ್ನು ನಿಭಾಯಿಸುವ ಮಾನಸಿಕ ಶಕ್ತಿಯನ್ನು ಮೈಗೂಡಿಸಿಕೊಳ್ಳಬೇಕು. ಮಾನಸಿಕ ಶಕ್ತಿ ಜೀವನದ ಯಶಸ್ಸಿನ ಯಂತ್ರ ಇದ್ದಂತೆ. ಹಾಗಾಗಿ ದೃಢ ಮಾನಸಿಕ ಶಕ್ತಿಯಿಂದ ಯಶಸ್ವಿ ಜೀವನ ಸಾಧ್ಯ ಎಂದರು.

ಸಮಸ್ಯೆ ಇಲ್ಲದ ಜೀವನ ಶೂನ್ಯ. ಪ್ರತಿ ಸಮಸ್ಯೆಗೂ ಪರಿಹಾರ ಇರುತ್ತದೆ. ಸಮಸ್ಯೆ ನಿವಾರಿಸುವ ಮೂಲಕ ಯಶಸ್ಸು ಸಾಧಿಸುವುದೇ ಜೀವನದ ಗುರಿಯಾಗಬೇಕು ಎಂದು ಅರ್ಜುನ ಹಾಗೂ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಮಾಲತಿ ಹೊಳ್ಳ ಹೇಳಿದರು.

ಗಗನಯಾನಿ ಅನೌಷೆ ಅನ್ಸಾರಿ ಮಾತನಾಡಿದರು. ಹಿರಿಯ ಪತ್ರಕರ್ತ ಶೇಖರ ಗುಪ್ತಾ ಮಾತನಾಡಿ, ಪತ್ರಕರ್ತರು ಚಿಂತನಶೀಲತೆ ಗುಣವನ್ನು ಹೊಂದಿರಬೇಕು. ಯುವಕರು ಆಧುನಿಕ ತಂತ್ರಜ್ಞಾನದ ಉಪಯೋಗ ಪಡೆಯುವ ಮೂಲಕ ಭಾರತದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ತಿಳಿಸಿದರು. ದೇಶಪಾಂಡೆ ಫೌಂಡೇಶನ್‌ನ ಡಾ| ಗುರುರಾಜ ದೇಶಪಾಂಡೆ ನಿರೂಪಿಸಿದರು.



ಹುಬ್ಬಳ್ಳಿ : ಟೈಕಾನ್ ಹುಬ್ಬಳ್ಳಿ-2016ರ ಟೈ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನೊಬೆಲ್ ಪ್ರಶಸ್ತಿ ಪುರಸ್ಕೃತ ಪ್ರೊ|ಮೊಹಮ್ಮದ ಯೂನುಸ್ ಅವರು ಬೆಳಗಾವಿಯ ಗೋಗಟೆ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿಗೆ ಬೆಸ್ಟ್ ಲೀಡರ್ ಪ್ರಶಸ್ತಿ ವಿತರಿಸಿದರು.

### ಲೀಡ್ ಬಹುಮಾನ ವಿಜೇತರು

ಬೆಳಗಾವಿಯ ಗೋಗಟೆ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ವಿಜಯಪುರದ ಎ.ಎಸ್.ಪಾಟೀಲ ಕಾಲೇಜ್ ಆಫ್ ಕಾಮರ್ಸ್‌ನ ಸುಪ್ರಿಯಾ, ಸ್ವಚ್ಛ ಭಾರತ ಅಭಿಯಾನಕ್ಕೆ ಶ್ರಮಿಸಿದ ಸೌಜನ್ಯ, ದೀಪಿಕಾ ಮತ್ತು ದೀಪಾಲಿ, ಬಳ್ಳಾರಿ ವೀರಶೈವ ಕಾಲೇಜಿನ ಹರೀಶ ಡಿ., ವಿಜಯಪುರದ ಎಂಎಸ್‌ಡಬ್ಲ್ಯು ಕಾಲೇಜಿನ ರಮೇಶ, ಜೈನ್ ಇಂಜಿನಿಯರಿಂಗ್ ಕಾಲೇಜಿನ ಸಂತೋಷ ಪಾಟೀಲ, ವಾರಣಾಸಿಯ ಬನಾರಸ ಹಿಂದು ವಿಶ್ವವಿದ್ಯಾಲಯದ ಪ್ರಿಯಾಂಕಾ ದೇ (ಬೆಸ್ಟ್ ಲೀಡರ್ ಪ್ರಶಸ್ತಿ), ರಾಯಭಾಗದ ರಾಯಭಾಗ ಪಾಲಿಟೆಕ್ನಿಕ್ ಕಾಲೇಜ್ (ಬೆಸ್ಟ್ ಪರಫಾರ್ಮಿಂಗ್ ಕಾಲೇಜ್), ಚಿಕ್ಕೋಡಿಯ ಎ.ಎ. ಪಾಟೀಲ ಕಾಲೇಜಿನ ಡಾ| ಜಯಶ್ರೀ ನಾಗರಹಳ್ಳ (ಬೆಸ್ಟ್ ಫ್ಯಾಕಲ್ಟಿ ಪ್ರಶಸ್ತಿ), ಶರತ್ ಪಾಟೀಲ ಮತ್ತು ತಂಡ (ಬೆಸ್ಟ್ ಇನ್ಕ್ಯುಬೇಟರ್ ಪ್ರಶಸ್ತಿ).

ಟೈ ಪ್ರಶಸ್ತಿ: ಎಸ್.ಎಲ್. ಟೆಕ್ನಾಲಜಿ ಪೈಲಿನ ಪ್ರಸಾದ ಪಾಟೀಲ, ಶಶಿ ಶೇಖರ (ಯುವ ಉದ್ಯಮಿ ಪ್ರಶಸ್ತಿ), ಅರವಿಂದ ಬೆಳಗೇರಿ (ಉತ್ತಮ ಉದ್ಯಮಿ ಪ್ರಶಸ್ತಿ), ನರೇಂದ್ರ ಬುರ್ಲೋಟಾ (ಜೀವಮಾನ ಸಾಧನೆ ಪ್ರಶಸ್ತಿ).